# ಶ್ರೀಮಾತೆಯವರ ಅಂತಿಮ ಯಾತ್ರೆ

ಬಂಗಾಳಿ ಮೂಲ:
ಸ್ವಾಮಿ ಶಾರದೇಶಾನಂದ

ಅನುವಾದ:
ಸ್ವಾಮಿ ರಾಘವೇಶಾನಂದ

'ಶರಣರ ಗುಣವನ್ನು ಮರಣದಲ್ಲಿ ಕಾಣು' –ಎನ್ನುತ್ತದೆ ಕನ್ನಡದ ನುಡಿಗಟ್ಟೊಂದು. ಶ್ರೀಮಾತೆಯವರ ಬಾಳು ಸರಳ, ಶಾಂತ. ಹಾಗೆಯೇ ಅವರ ಸಾವಿನ ಸಂದರ್ಭವೂ ಕೂಡ. ಅವರ ಮರಣ ಅಸಹನೀಯವಾಗಿದ್ದರೂ, ಅವರ ಕೃಪೆಯಿಂದ ಅದನ್ನು ತಾಳಿಕೊಳ್ಳುವ ಸಹನೆ, ತಾಳ್ಮೆಯನ್ನು ಆಕೆಯ ಮಕ್ಕಳು ಹೇಗೆ ಪಡೆದುಕೊಂಡರೆಂದು ಈ ಸುಂದರ ಬರಹ ವಿವರಿಸುವುದು. ಬಂಗಾಳಿ ಮೂಲದ ಅನುವಾದ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಅವರದು.

ಶ್ರೀಮಾತೆ ಶಾರದಾದೇವಿಯವರು ದೇಹ ತ್ಯಜಿಸುವ ಕೆಲವು ದಿನಗಳ ಮುಂಚೆ ಅವರಿಗೆ ಬಹಳ ಅನಾರೋಗ್ಯ ಉಂಟಾಗಿತ್ತು. ಅದನ್ನು ತಿಳಿದು, ಅವರು ವಾಸಿಸುತ್ತಿದ್ದ ಉದ್ಬೋಧನಕ್ಕೆ, ಅವರ ದರ್ಶನಕ್ಕಾಗಿ ಸ್ವಾಮಿ ಶಿವಾನಂದರು (ರಾಮಕೃಷ್ಣ ಸಂಘದ ಆಗಿನ ಅಧ್ಯಕ್ಷರು) ಬಂದರು. ಶ್ರೀರಾಮಕೃಷ್ಣರಿಗೆ ಪೂಜೆಯಲ್ಲಿ ಅರ್ಪಿಸಿದ ಪುಷ್ಪಗಳನ್ನು ತೆಗೆದುಕೊಂಡು ನಾನು (ಸ್ವಾಮಿ ಶಾರದೇಶಾನಂದ) ಪ್ರತಿದಿನ ಬೇಲೂರು ಮಠದಿಂದ ಉದ್ಬೋಧನಕ್ಕೆ ಹೋಗುತ್ತಿದ್ದೆ. ಶ್ರೀಮಾತೆಯ ಆರೋಗ್ಯಸುಧಾರಣೆಗಾಗಿ ಬೇಲೂರು ಮಠದಲ್ಲಿ ವಿಶೇಷ ಪೂಜೆಗಳನ್ನು ಮಾಡಿಸಲಾಗಿತ್ತು. ಆ ಪೂಜೆಯಲ್ಲಿ ಉಪಯೋಗಿಸಿದ ತೀರ್ಥದ ನೀರನ್ನು ಶ್ರೀಮಾತೆಯವರ ಉಪಯೋಗಕ್ಕಾಗಿ ಇರಿಸಲಾಗುತ್ತಿತ್ತು. ಶ್ರೀಮಾತೆಯವರಿಗೆ ಆಹಾರದಲ್ಲಿ ರುಚಿಯೇ ಇರಲಿಲ್ಲ. ಆದ್ದರಿಂದ, ಸ್ವಾಮಿ ಶಿವಾನಂದರು ಪ್ರತಿದಿನವೂ ಬೇಲೂರು ಮಠದಿಂದ ನಿಂಬೆಹಣ್ಣುಗಳನ್ನು ಮತ್ತು ಸೊಪ್ಪುಗಳನ್ನು ಕಳುಹಿಸುತ್ತಿದ್ದರು. ನಾನು ಉದ್ಬೋಧನದಿಂದ ಹಿಂದಿರುಗಿದೊಡನೆ ಸ್ವಾಮಿ ಶಿವಾನಂದರು ತಪ್ಪದೆ ಶ್ರೀಮಾತೆಯ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದರು.

ಒಮ್ಮೆ ಸ್ವಾಮಿ ಶಿವಾನಂದರು ಉದ್ಬೋಧನಕ್ಕೆ ಭೇಟಿಯಿತ್ತಾಗ, ಅಲ್ಲೇ ಇದ್ದು ನನ್ನ ಜೊತೆ ಶ್ರೀಮಾತೆಯವರ ಆರೋಗ್ಯದ ಬಗ್ಗೆ ಕೂಲಂಕಷವಾಗಿ ಚರ್ಚೆ ನಡೆಸಿದರು. ಆಗ ಶ್ರೀಮಾತೆಗೆ ತುಂಬಾ ಬಿಕ್ಕಳಿಕೆ ಬರುತ್ತಿತ್ತು. ಸ್ವಾಮಿ ಶಿವಾನಂದರು ನನ್ನನ್ನು ಕರೆದು ಹೇಳಿದರು: "ನೀನು ತಕ್ಷಣ ಬೇಲೂರುಮಠಕ್ಕೆ ಹಿಂದಿರುಗು. ಸುಮಾರು ಐದು ಘಂಟೆಗೆ ಹಣ್ಣು ಮಾರುವವನು ಅಲ್ಲಿಗೆ ಬರುತ್ತಾನೆ. ಅವನಿಂದ ತಾಜಾ ತಾಳೆಹಣ್ಣುಗಳನ್ನು ಖರೀದಿಸಿ ತಾ. ಆ ಹಣ್ಣಿನ ರಸ ಬಿಕ್ಕಳಿಕೆಯನ್ನು ನಿಲ್ಲಿಸುತ್ತದೆ." ನಾನು ಅವರು ಹೇಳಿದಂತೆ ಮಾಡಿದೆ. ಆದರೆ ಅದು ಶ್ರೀಮಾತೆಯ ಬಿಕ್ಕಳಿಕೆಯನ್ನು ನಿಲ್ಲಿಸಲಿಲ್ಲ. ಇದರಿಂದ ಸ್ವಾಮಿ ಶಿವಾನಂದರಿಗೆ ತುಂಬಾ ದುಃಖವಾಯಿತು. ಶ್ರೀಮಾತೆಯವರ ಕಾಯಿಲೆಯನ್ನು ಗುಣಪಡಿಸುವ ನಮ್ಮ ಯತ್ನದಲ್ಲಿ ಇದೇ ಮೊದಲ ಅಪಶಕುನವಾಗಿರಲಿಲ್ಲ. ದೇವೀಪೂಜೆಯ ಸಮಯದಲ್ಲಿ, ಸ್ವಸ್ತ್ಯಯನಕ್ಕೆಂದು ಬೇಲೂರು ಮಠದಲ್ಲಿ ಶುಭದ ಸಂಕೇತವಾಗಿ ಇಟ್ಟ ಘಟ ಎರಡು ಬಾರಿ ಒಡೆದು ಅದನ್ನು ಬದಲಾಯಿಸಬೇಕಾಗಿ ಬಂದಿತ್ತು. ಈ ಬಗೆಯ ಅಪಶಕುನಗಳು ನಮ್ಮೆಲ್ಲರಿಗೂ ಅತ್ಯಂತ ಆತಂಕ ಹಾಗೂ ದುಃಖವನ್ನು ಉಂಟುಮಾಡಿದ್ದವು.

ಶ್ರೀಮಾತೆಯವರ ಆರೋಗ್ಯ ದಿನೇ ದಿನೇ ಕೆಡುತ್ತಾ ಬಂದಿತು. ಬೇಲೂರು ಮಠದಲ್ಲಿ ಎಲ್ಲರೂ ಅತ್ಯಂತ ಕಾತರರಾಗಿದ್ದರು. ಶ್ರೀಮಾತೆ ದೇಹತ್ಯಾಗ ಮಾಡುವ ಎರಡು ದಿನಗಳ ಮುಂಚೆ ಅವರನ್ನು ನೋಡಲು ಸ್ವಾಮಿ ಶಿವಾನಂದರು ಮತ್ತೆ ಉದ್ಬೋಧನಕ್ಕೆ ಹೋಗಿದ್ದರು. ಶ್ರೀಮಾತೆ ನಿರ್ಯಾಣ ಹೊಂದಿದ ದಿನದಂದು "ಮಧ್ಯರಾತ್ರಿಯ ಹೊತ್ತಿಗೆ ಶ್ರೀಮಾತೆಯವರು ದೇಹತ್ಯಾಗ ಮಾಡಿದರು" ಎಂಬ ಶೋಕವಾರ್ತೆ ಬಂದಿತು. ಸುದ್ದಿ ತಂದ ದೋಣಿಯಲ್ಲೇ ಬೇಲೂರು ಮಠದ ಅನೇಕ ಸಾಧು, ಬ್ರಹ್ಮಚಾರಿಗಳನ್ನು ಸ್ವಾಮಿ ಶಿವಾನಂದರು ಉದ್ಬೋಧನಕ್ಕೆ ಕಳುಹಿಸಿದರು. ಅವರು ಆ ರಾತ್ರಿ ಮತ್ತೆ ವಿಶ್ರಮಿಸಲಿಲ್ಲ. ಗಂಗೆಯ ತೀರದಲ್ಲಿ ಅಂತರ್ಮುಖಿಗಳಾಗಿ, ಗಂಭೀರವಾಗಿ ನಡೆದಾಡುತ್ತಿದ್ದರು. ಒಮ್ಮೆ ದಕ್ಷಿಣೇಶ್ವರದತ್ತ, ಮತ್ತೊಮ್ಮೆ ಉದ್ಬೋಧನದ ಕಡೆಗೆ, ಮತ್ತೊಮ್ಮೆ ಕಾಶೀಪುರದ ಸ್ಮಶಾನದೆಡೆಗೆ ದೀರ್ಘಕಾಲ ದೃಷ್ಟಿ ಹಾಯಿಸಿ ನೋಡುತ್ತಿದ್ದರು. ಅವರ ಕಣ್ಣು ತೆರೆದಿದ್ದರೂ ದೃಷ್ಟಿಯಲ್ಲಿ ಏನೋ ಒಂದು ಬಗೆಯ ಶೂನ್ಯತೆ ಕವಿದಿತ್ತು. ಆಗಾಗ ಜೊತೆಯಲ್ಲಿದ್ದ ಸಾಧುಗಳೊಂದಿಗೆ ಶ್ರೀರಾಮಕೃಷ್ಣರ, ಶ್ರೀಮಾತೆಯವರ ಬಗ್ಗೆ ಅಸ್ಪಷ್ಟವಾಗಿ ಒಂದೆರಡು ಮಾತುಗಳನ್ನು ಹೇಳುತ್ತಿದ್ದರು. ಮಠವಿಡೀ ದಟ್ಟವಾದ ಶೋಕದ ಮುಸುಕಿನಲ್ಲಿ ಸಿಲುಕಿದಂತಿತ್ತು.

ಆಗ ನಾನು ದೇವಸ್ಥಾನದ ಭಂಡಾರದಲ್ಲಿ ಸೇವೆ ಸಲ್ಲಿಸುತ್ತಿದ್ದೆ. ಲಕ್ಷ್ಮಣ ಮಹಾರಾಜರು ಪೂಜಾರಿಯಾಗಿದ್ದರು. ಸ್ವಾಮಿ ಶಿವಾನಂದರು ನಮ್ಮನ್ನು ಕರೆದು, ಬೆಳಿಗ್ಗೆ ಶ್ರೀರಾಮಕೃಷ್ಣರನ್ನು ಶಯನದಿಂದ ಏಳಿಸಿದ ತಕ್ಷಣವೇ, ಶೀಘ್ರವಾಗಿ ಪೂಜೆಯನ್ನು ಮಾಡಿ ಮುಗಿಸುವಂತೆ ತಿಳಿಸಿದರು. ಶ್ರೀಮಾತೆಯವರ ದೇಹವನ್ನು ಬೇಲೂರು ಮಠಕ್ಕೆ ತರುವ ಮುಂಚೆಯೇ ಪೂಜೆಯೆಲ್ಲಾ ಮುಗಿದಿರಬೇಕು ಎಂಬುದು ಅವರ ಅಭಿಪ್ರಾಯವಾಗಿದ್ದಿತು. ಅಲ್ಲದೆ ಶ್ರೀಮಾತೆಯವರ ಪಾರ್ಥಿವ ದೇಹಕ್ಕೆ ಪೂಜೆ ಮಾಡಲು ಬೇಕಾದ ಹೂವು, ಬಿಲ್ವಪತ್ರೆ, ಆರತಿ ಮುಂತಾದ ಸಾಮಗ್ರಿಗಳನ್ನೆಲ್ಲ ಸಿದ್ಧ

ವಾಗಿರಿಸಲು ತಿಳಿಸಿದರು. ನಾವು ಅದರಂತೆಯೇ ಎಲ್ಲ ಏರ್ಪಾಡುಗಳನ್ನೂ ಮಾಡಿ ಮುಗಿಸಿದೆವು. ಹೂವಿನ ಮಾಲೆ, ಆರತಿ, ದೀಪಗಳನ್ನೂ ಅಣಿ ಮಾಡಿಟ್ಟೆವು.

ಬೆಳಗಾಗುತ್ತಿದ್ದಂತೆಯೇ ಭುವನ್ ಬಾಬು ಎಂಬ ಬಾರಾನಗರದ ಒಬ್ಬ ಶ್ರೀಮಂತ ಭಕ್ತ ಜೋರಾಗಿ ಅಳುತ್ತಾ ಬಂದು ಸ್ವಾಮಿ ಶಿವಾನಂದರಿಗೆ ಹೇಳಿದ: "ಮಹಾಪುರುಷ್ ಮಹಾರಾಜ್, ತಾವು ಶ್ರೀಮಾತೆಯವರ ಮುಖವನ್ನು ಒಮ್ಮೆ ನೋಡಿದರೆ ಸಾಕು, ಅವರು ಇನ್ನಿಲ್ಲ ಎಂಬ ದುಃಖ ಉಂಟಾಗದು. ಅವರ ಮುಖಮಂಡಲ ಅಷ್ಟು ಶಾಂತಿಯಿಂದ ಬೆಳಗುತ್ತಿದೆ! ಒಂದು ದಿವ್ಯಜ್ಯೋತಿ ಅದರಿಂದ ಹೊರಟು ಎಲ್ಲೆಡೆ ಹರಡುತ್ತಿದೆ. ಅವರ ಮುಖದ ಮಂದಹಾಸವನ್ನು ನೋಡುತ್ತಿದ್ದರೆ, ಅಲ್ಲಿಂದ ಕಣ್ಣು ತೆಗೆಯಲು ಮನಸ್ಸೇ ಬರುವುದಿಲ್ಲ." ಶ್ರೀಮಾತೆಯವರ ಅಂತಿಮ ದರ್ಶನವನ್ನು ಅವರು ಪಡೆದಿದ್ದರು. ಅದನ್ನು ಹೀಗೆ ವಿವರಿಸಿದರು. ಸ್ವಾಮಿ ಶಿವಾನಂದರು ಈ ಭಕ್ತನ ಮಾತುಗಳನ್ನು ಮೌನವಾಗಿ ಆಲಿಸಿದರು. ನಂತರ ಭುವನ್ ಬಾಬು ಶ್ರೀಮಾತೆಯವರ ಅಂತಿಮ ಕಾರ್ಯಕ್ಕೆ ಬೇಕಾದ ಗಂಧದ ಕಟ್ಟಿಗೆ, ತುಪ್ಪ ಮುಂತಾದ ಸಾಮಗ್ರಿಗಳನ್ನೆಲ್ಲ ಸಂಗ್ರಹಿಸಿ ತಂದರು. ಅಂದು, ಅದು ಅವರ ಪಾಲಿನ ಸೇವಾಭಾಗ್ಯವಾಗಿತ್ತು.

ಕೆಲವು ದಿನಗಳ ನಂತರ ಸ್ವಾಮಿ ಅರೂಪಾನಂದರು ಕೂಡ ಶ್ರೀಮಾತೆಯ ಜ್ಯೋತಿರ್ಮಯ ಮುಖಕಾಂತಿಯ ಬಗ್ಗೆ ಹೀಗೆ ಹೇಳಿದರು: "ಶ್ರೀಮಾತೆ *ಕಾಲಾ ಅಜಾರ್* ಎಂಬ ಜ್ವರದಿಂದ ನರಳಿದ ನಂತರ, ಅವರ ದೇಹ ತುಂಬಾ ತೆಳ್ಳಗಾಗಿ ಹೋಯಿತು. ಅವರ ದೇಹದ ಬಣ್ಣ ಬಹಳ ಕಪ್ಪಾಗಿ ಹೋಯಿತು. ಮುಖದ ಕಾಂತಿಯೂ ಮಾಸಿಹೋಯಿತು. ಅವರ ದೇಹತ್ಯಾಗದ ನಂತರ, ಅವರಿಗೆ ಒಂದು ಹೊಸ ಸೀರೆ ಉಡಿಸಿ, ಒಳ್ಳೆಯ ಹೊಸ ಹಾಸಿಗೆಯ ಮೇಲೆ ಅವರನ್ನು ಮಲಗಿಸುವಂತೆ ಸ್ವಾಮಿ ಶಾರದಾನಂದರು ನನಗೆ ತಿಳಿಸಿದರು. ಅವರ ತಲೆಯ ಬಳಿ ದೀಪ ಹಾಗೂ ಗಂಧದ ಕಡ್ಡಿಗಳನ್ನು ಹಚ್ಚಿಡಲಾಯಿತು. ಸಾಧುಗಳು ಮತ್ತು ಭಕ್ತರು ಕಾಳೀ ಸಂಕೀರ್ತನೆ ಹಾಡಲು ಶುರು ಮಾಡಿದರು. ಆಗ ಯಾರೋ ಒಬ್ಬರು ಭಕ್ತರು ಶ್ರೀಮಾತೆಯ ಮುಖದತ್ತ ದೃಷ್ಟಿ ಹಾಯಿಸಿ, ಜೋರಾಗಿ ಕೂಗಿ ಹೇಳಿದರು, 'ನೋಡಿ, ನೋಡಿ, ಶ್ರೀಮಾತೆಯ ಮುಖ ಬೆಳಗುತ್ತಿದೆ! ಎಷ್ಟು ದೇದೀಪ್ಯಮಾನವಾಗಿದೆ! ಎಷ್ಟು ಸುಂದರವಾಗಿದೆ ! ' ಬಹಳ ಹೊತ್ತಾದ ಮೇಲೆ ಆ ಕಾಂತಿ ಕಂದತೊಡಗಿತು. ಆದರೂ ಅವರ ದೇಹವನ್ನು ಚಿತೆಗೇರಿಸಿದಾಗ ಅವರ ಮುಖ ಜ್ಯೋತಿರ್ಮಯವಾಗಿತ್ತು. ಅವರ ಕೈ ಕಾಲುಗಳು ಅತ್ಯಂತ ಮೃದುವಾಗಿದ್ದವು."

ಉದ್ಬೋಧನದಿಂದ ಬೇಲೂರು ಮಠಕ್ಕೆ ದೇಹವನ್ನು ತರಲಾಗುತ್ತಿತ್ತು. ಇತ್ತ, ಬೇಲೂರು ಮಠದ ಗರ್ಭಗುಡಿಯಲ್ಲಿ, ಲಕ್ಷ್ಮಣ ಮಹಾರಾಜರು ಗುರುಮಹಾರಾಜರ ಪೂಜೆಗೆ ಸಿದ್ಧಗೊಳಿಸುತ್ತಿದ್ದರು. ಶ್ರೀಮಾತೆಯವರ ದೇಹ ಬರುವುದಕ್ಕೆ ಮುಂಚೆಯೇ ಪೂಜೆ ಮುಗಿಸಬೇಕಾಗಿತ್ತು. ಅಲ್ಲಿ ಒಂದೆಡೆ ಗೋಡೆಯ ಮೇಲೆ ಶ್ರೀಮಾತೆಯ ಭಾವಚಿತ್ರವನ್ನು ತೂಗು ಹಾಕಲಾಗಿತ್ತು. ಆ ಚಿತ್ರವನ್ನು ಗೋಡೆಯಿಂದ ತೆಗೆದು, ಶ್ರೀರಾಮಕೃಷ್ಣರ ಭಾವಚಿತ್ರದ ಪಕ್ಕದಲ್ಲೇ, ವೇದಿಕೆಯ ಮೇಲೆ, ಇಡಲು ಸ್ವಾಮಿ ಶಿವಾನಂದರು ತಿಳಿಸಿದರು. ಅಂತೆಯೇ ಒಂದು ಪ್ರತ್ಯೇಕವಾದ ಆಸನವೊಂದರ ಮೇಲೆ, ಶ್ರೀಮಾತೆಯವರ ಭಾವಚಿತ್ರವನ್ನು ಇಡಲಾಯಿತು. ಶ್ರೀಮಾತೆಯವರ ಪಾದಧೂಳಿಯಿದ್ದ ಪುಟ್ಟ ಭರಣಿಯೊಂದನ್ನು ಆ ಭಾವಚಿತ್ರದ ಮುಂದೆ ಇಡಲಾಯಿತು. ಅಂದಿನಿಂದ ಪ್ರತಿದಿನವೂ ಶ್ರೀರಾಮಕೃಷ್ಣರ ಅಸ್ಥಿಯ ಪೂಜೆಯ ನಂತರ, ಇದಕ್ಕೂ ಪೂಜೆ ಮಾಡುವುದು ಆರಂಭವಾಯಿತು. ಸ್ವಾಮಿ ಶಿವಾನಂದರ ಸಲಹೆಯಂತೆ ಅಂದಿನಿಂದ ಪ್ರತಿದಿನ ಶ್ರೀಮಾತೆಯ ನಿತ್ಯಪೂಜೆಯನ್ನೂ ಆರಂಭಿಸಲಾಯಿತು. ಸ್ವಾಮಿ ಶಿವಾನಂದರು, ಪೂಜಾರಿಯಾಗಿದ್ದ ಲಕ್ಷ್ಮಣ ಮಹಾರಾಜರಿಗೆ, ಶ್ರೀಮಾತೆಯ ಪೂಜೆಯನ್ನು ಶಕ್ತಿ ಬೀಜದ ಮಂತ್ರದೊಂದಿಗೆ ಮಾಡುವುದನ್ನು ತಿಳಿಸಿಕೊಟ್ಟರು. ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡಿದ ನಂತರ, ಅದೇ ನೈವೇದ್ಯವನ್ನು ಶ್ರೀಮಾತೆಗೂ ಅರ್ಪಿಸುವಂತೆ ತಿಳಿಸಿದರು. ಒಮ್ಮೆ ಸ್ವಾಮಿ ಶಿವಾನಂದರು ಹೇಳಿದರು: "ನಾನು ಶ್ರೀರಾಮಕೃಷ್ಣರಿಗೆ ನೈವೇದ್ಯವನ್ನು ಕೊಡುವಾಗ, ಶ್ರೀಮಾತೆಯೇ ಅವರಿಗೆ ಉಣಿಸುತ್ತಿರುವಂತೆಯೂ, ನಂತರ ಅದನ್ನು ಭಕ್ತರಿಗೆ ಹಂಚಿ, ತಾವೂ ಸ್ವೀಕರಿಸುತ್ತಿರುವಂತೆಯೂ ಭಾವಿಸುತ್ತೇನೆ."

ಇತ್ತ ಉದ್ಬೋಧನಲ್ಲಿ ಶ್ರೀಮಾತೆಯವರ ದೇಹವನ್ನು ಹೂವು, ಗಂಧಗಳಿಂದ ಅಲಂಕರಿಸಿದ್ದ ಮಂಚದ ಮೇಲಿರಿಸಲಾಯಿತು. ಸಂನ್ಯಾಸಿಗಳು, ಬ್ರಹ್ಮಚಾರಿಗಳು ಹಾಗೂ ಭಕ್ತರು ಮೆರವಣಿಗೆಯಲ್ಲಿ ಅದನ್ನು ಉದ್ಬೋಧನದಿಂದ ಕುಟಿಘಾಟ್‌ಗೆ (ಗಂಗೆಯ ತೀರ) ತಂದರು. ಸ್ವಾಮಿ ಶಿವಾನಂದರು, ಸಂನ್ಯಾಸಿಗಳು ಮತ್ತು ಭಕ್ತರು ಮೆರವಣಿಗೆಯ ಜೊತೆಯಲ್ಲೇ ಬರಿಗಾಲಿನಲ್ಲಿ ನಡೆದು ಬಂದರು. ಅಲ್ಲಿಂದ ಒಂದು ದೋಣಿಯಲ್ಲಿ ಬೇಲೂರು ಮಠಕ್ಕೆ ಶ್ರೀಮಾತೆಯ ಶರೀರವನ್ನು ತರಲಾಯಿತು.

ಬೇಲೂರು ಮಠದ ಗಂಗೆಯ ದಡಕ್ಕೆ ನೌಕೆಯು ಬರುತ್ತಿದ್ದಂತೆ ಅಲ್ಲಿ ಶೋಕತಪ್ತರಾಗಿ ಕಾಯುತ್ತಿದ್ದವರಿಗೆಲ್ಲ ಶ್ರೀಮಾತೆಯ ಅಂತಿಮ ದರ್ಶನ ದೊರೆಯಿತು. ಶ್ರೀರಾಮಕೃಷ್ಣ ಮಂದಿರದ ಮುಖ್ಯದ್ವಾರದ ಮುಂದಿರುವ ವಿಶಾಲವಾದ ಜಾಗದಲ್ಲಿ ಒಂದು ಅಲಂಕೃತ ಮಂಚದ ಮೇಲೆ ಶ್ರೀಮಾತೆಯವರ ದೇಹವನ್ನು ಇಟ್ಟು ಆರತಿ ಮಾಡಲಾಯಿತು. ಸ್ವಾಮಿ ಶಿವಾನಂದರು, ಸ್ವಾಮಿ ಶಾರದಾನಂದರು ಹಾಗೂ ಉಳಿದ ಸಂನ್ಯಾಸಿಗಳು, ಬ್ರಹ್ಮಚಾರಿಗಳು ಶ್ರೀಮಾತೆಯವರ ಪಾದಕ್ಕೆ ಪುಷ್ಪಗಳನ್ನರ್ಪಿಸಿ ನಮಸ್ಕರಿಸಿದರು. ನಂತರ ಗಂಗೆಯ ದಡದಲ್ಲಿ ಶ್ರೀಮಾತೆಯವರ ದೇಹಕ್ಕೆ ಶಾಸ್ತ್ರೋಕ್ತವಾಗಿ ಸ್ನಾನ ಮಾಡಿಸಿ, ವಿಧಿವತ್ತಾಗಿ ಮಾಡಬೇಕಾದ ಪೂಜೆ

**ಎಷ್ಟೋ ಸಲ ಕೆಲವರು ಬಂದು ಮತ್ತೆ ಮತ್ತೆ ಪೀಡಿಸಿದಾಗ ನಾನು ಯೋಚಿಸುತ್ತೇನೆ, 'ಒಳ್ಳೇದು, ಈ ಶರೀರ ಒಂದಲ್ಲ ಒಂದು ದಿನ ಹೋಗಲೇಬೇಕು. ಅದು ಈ ಕ್ಷಣವೇ ಬಿದ್ದು ಹೋಗಲಿ. ನಾನು ಅವನಿಗೆ ಮುಕ್ತಿ ಕೊಡುತ್ತೇನೆ ಎಂದು.' – ಶ್ರೀಮಾತೆ ಶಾರದಾದೇವಿ**

ಯನ್ನೆಲ್ಲಾ ಮಾಡಿದರು. ಈಗ ಶ್ರೀಮಾತೆಯವರ ದೇವಸ್ಥಾನವಿರುವ ಸ್ಥಳದಲ್ಲಿ ಸಿದ್ಧವಾಗಿದ್ದ ಚಿತೆಯ ಮೇಲೆ, ಆ ಪವಿತ್ರ ದೇಹವನ್ನಿಟ್ಟು ದಹನ ಮಾಡಲಾಯಿತು. ಮೊಟ್ಟಮೊದಲು ಸ್ವಾಮಿ ಶಾರದಾನಂದರು ಅಗ್ನಿಸ್ಪರ್ಶ ಮಾಡಿದರು. ನಂತರ ಉಳಿದ ಸಾಧುಗಳು ಅವರನ್ನು ಅನುಸರಿಸಿದರು. ಗಂಧದ ಕಡ್ಡಿ, ತುಪ್ಪ, ಗಂಧದಮರದ ತುಂಡುಗಳನ್ನು ಉರಿಯುತ್ತಿದ್ದ ಚಿಂಕಿಗೆ ಅರ್ಪಿಸಲಾಯಿತು. ಸುಮಾರು ಎರಡು ಘಂಟೆಗಳಲ್ಲಿ ದಹನ ಕಾರ್ಯ ಮುಗಿಯಿತು. ಇನ್ನೂ ಉರಿಯುತ್ತಿದ್ದ ದೊಡ್ಡ ದೊಡ್ಡ ಕೊಳ್ಳಿಗಳನ್ನು ನಿಧಾನವಾಗಿ ತೆಗೆದು ಗಂಗೆಗೆ ಹಾಕಲಾಯಿತು. ಚಿತೆಯನ್ನು ತಣ್ಣಗಾಗಿಸಲು ಸಾಧುಗಳು ಗಂಗೆಯ ನೀರನ್ನು ಚಿಮುಕಿಸಲಾರಂಭಿಸಿದರು. ದೇವತೆಗಳೂ ಆ ಕಾರ್ಯದಲ್ಲಿ ಭಾಗವಹಿಸಲು ಬಯಸುವರೋ ಎಂಬಂತೆ ಆ ಸಮಯಕ್ಕೆ ಸರಿಯಾಗಿ ನಿಧಾನವಾಗಿ ಮಳೆ ಬರಲಾರಂಭಿಸಿತು. ಶ್ರೀಮಾತೆಯ ರೂಪದಲ್ಲಿ ಇದುವರೆಗೂ ಮಹಾಮಾಯೆ ತಾನೇ ಸಾಂತ್ವನ ನೀಡುತ್ತ, ಮತ್ತೆ ಚೇತನ ತುಂಬುತ್ತಿರುವಂತೆ ಆ ಮಳೆ ದಣಿದಿದ್ದ ಸಾಧುಗಳನ್ನೂ, ಭಕ್ತರನ್ನೂ ತೋಯಿಸಿತು. ಸಾಧುಗಳೆಲ್ಲ ಗಂಗೆಯಲ್ಲಿ ಮಿಂದು ಶ್ರೀರಾಮಕೃಷ್ಣರಿಗೆ ನಮಸ್ಕರಿಸಲು ಗರ್ಭಗುಡಿಗೆ ತೆರಳಿದರು. ಅಲ್ಲಿ ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರು ಅಕ್ಕಪಕ್ಕದಲ್ಲಿ ವಿರಾಜಿಸುತ್ತಿದ್ದರು. ಅಂದು ಮಾಸ್ಟರ್ ಮಹಾಶಯರೂ ಕೂಡ ಅಲ್ಲಿದ್ದರು. ಅವರು ಶ್ರೀರಾಮಕೃಷ್ಣರನ್ನು ಹಾಗೂ ಶ್ರೀಮಾತೆಯವರನ್ನು ದಿಟ್ಟಿಸುತ್ತಾ, ಯಾವುದೋ ಮಂತ್ರವನ್ನು ಉಚ್ಚರಿಸುತ್ತಿದ್ದರು; ತಮ್ಮದೇ ಆದ ಯಾವುದೋ ಭಾವನಾರಾಜ್ಯದಲ್ಲಿ ವಿಹರಿಸುತ್ತಿದ್ದರು. ನಂತರ, ರಾತ್ರಿಯ ಪ್ರಸಾದ ಸ್ವೀಕರಿಸುವಾಗಲೂ ಮಾಸ್ಟರ್ ಮಹಾಶಯ ಕಂಡುಬರಲಿಲ್ಲ.

ಶ್ರೀರಾಮಕೃಷ್ಣರ ಸಂಜೆಯ ಆರತಿಯ ನಂತರ ನೆರೆದಿದ್ದ ಭಕ್ತರೆಲ್ಲ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದರು. ಇಡೀ ಬೇಲೂರು ಮಠವೇ ಆಕ್ರಂದಿಸುತ್ತಿರುವಂತಿತ್ತು; ದುಃಖತಪ್ತರಾಗಿದ್ದ ಸಾಧುಗಳು ಮತ್ತು ಬ್ರಹ್ಮಚಾರಿಗಳಿಗೆ ಸಾಂತ್ವನ ನೀಡಲು, ಸ್ವಾಮಿ ಶಿವಾನಂದರು ಶ್ರೀಮಾತೆಯ ಮಹಿಮೆಯನ್ನು ಹಾಡಿ ಹೊಗಳಲಾರಂಭಿಸಿದರು. ಒಂದೆರಡು ದಿನಗಳ ನಂತರ ಒಬ್ಬರು ದುಃಖತಪ್ತ ದಂಪತಿಗಳಿಗೆ ಅವರು ಹೇಳಿದರು. : **"ತನ್ನ ಮಕ್ಕಳನ್ನು ಬಿಟ್ಟು ಎಲ್ಲಿಗೆ ಹೋಗುವಳು ಆ ತಾಯಿ? ಅವರು ನಮ್ಮನ್ನು ಬಿಟ್ಟು ಎಲ್ಲಿಗೂ ಹೋಗಿಲ್ಲ. ಅವರು ಈಗ ಎಲ್ಲೆಡೆ ಆವರಿಸಿಕೊಂಡಿದ್ದಾರೆ. ಮೊದಲಾದರೋ, ಅವರು ಯಾವುದಾದರೊಂದು ಸ್ಥಳದಲ್ಲಿರುತ್ತಿದ್ದರು, ಅವರನ್ನು ನೋಡಲು ಕಷ್ಟಪಟ್ಟು ಅಲ್ಲಿಗೇ ಹೋಗಬೇಕಾಗುತ್ತಿತ್ತು. ಈಗ ನಾವು ಎಲ್ಲಿಗೂ ಹೋಗಬೇಕಾಗಿಲ್ಲ. ನಾವು ಎಲ್ಲಿದ್ದೇವೆಯೋ ಅಲ್ಲೇ ಅವರ ಕೃಪೆಯನ್ನು ಪಡೆಯಬಹುದು. ಅದಲ್ಲದೆ, ಅವರನ್ನು ಮನತುಂಬಿ ಭಕ್ತಿಭಾವದಿಂದ ಪ್ರಾರ್ಥಿಸಿದರೆ ನಾವಿದ್ದಲ್ಲೇ ಅವರ ದರ್ಶನ ಪಡೆಯಬಹುದು."**

ಚಿತೆಯ ಬೆಂಕಿಯೆಲ್ಲ ಸಂಪೂರ್ಣವಾಗಿ ಆರಿದ ಮೇಲೆ, ರಾಸ್‌ಬಿಹಾರಿ ಮಹಾರಾಜರು ಒಂದು ತಾಮ್ರದ ಪಾತ್ರೆಯನ್ನು ತರಲು ತಿಳಿಸಿದರು. ದೇವಸ್ಥಾನದ ಉಗ್ರಾಣದಿಂದ ಅದನ್ನು ತರಲಾಯಿತು. ಶ್ರೀಮಾತೆಯ ಪವಿತ್ರವಾದ ಅಸ್ಥಿಯನ್ನು ಅದರಲ್ಲಿ ಶೇಖರಿಸಲಾಯಿತು. ಅಸ್ಥಿಯಲ್ಲಿ ಉಳಿದುಕೊಂಡಿದ್ದ (ಬಲರಾಂ ಬೋಸರ ಮಗಳು ಕೊಟ್ಟಿದ್ದ) ಹೊಸ ಬಳೆಯ ಚೂರುಗಳನ್ನೂ, ಮೂಳೆಯ ಚೂರುಗಳನ್ನು ಆ ತಾಮ್ರದ ಪಾತ್ರೆಯಲ್ಲಿ ಇಡಲಾಯಿತು. ಅಂದಿನಿಂದ ದಹನಕ್ರಿಯೆ ನಡೆದ ಸ್ಥಳದಲ್ಲಿ ಹೂವು, ಬಿಲ್ವಪತ್ರೆ, ನೈವೇದ್ಯ ಮುಂತಾದವುಗಳಿಂದ ಪೂಜೆ ಆರಂಭವಾಯಿತು. ಹದಿಮೂರನೆಯ ದಿನದಂದು ದೊಡ್ಡ ಪ್ರಮಾಣದಲ್ಲಿ ಪೂಜೆ ಹಾಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಆದರೆ ಬೆಳಗಿನಿಂದಲೇ ಆಕಾಶದಲ್ಲಿ ಮೋಡ ಕವಿದ ವಾತಾವರಣವಿತ್ತು; ಯಾವ ಕ್ಷಣದಲ್ಲಾದರೂ ಮಳೆ ಸುರಿಯುವಂತಿತ್ತು. ಸ್ವಾಮಿ ಶಿವಾನಂದರು ಅತ್ಯಂತ ಭರವಸೆಯಿಂದ ಹೇಳಿದರು, "ಭಯಪಡಬೇಡಿ. ನಾವು ಯಾರ ಗೌರವಾರ್ಥ ಈ ಸಮಾರಂಭವನ್ನು ಮಾಡುತ್ತಿದ್ದೇವೆಂದು ನಿಮಗೆ ಗೊತ್ತಿಲ್ಲವೇ? ಇದು ಜಗನ್ಮಾತೆಗೇ ಕೊಡುತ್ತಿರುವ ಔತಣ. ಯಾರು ಈ ಜಗತ್ತಿನ ಸೃಷ್ಟಿ ಹಾಗೂ ಪಾಲನೆಯನ್ನು ನೋಡಿಕೊಳ್ಳುತ್ತಾಳೋ, ಅವಳೇ ಬೇಕಾದ ವ್ಯವಸ್ಥೆಯನ್ನೆಲ್ಲಾ ಮಾಡುವಳು. ನೀವು ಕಾತರರಾಗಬೇಕಿಲ್ಲ. ಎಲ್ಲಾ ಸಿದ್ಧತೆಗಳನ್ನೂ ಮಾಡಿ." ಅವರು ಹೇಳಿದ ಹಾಗೆ ನಿಧಾನವಾಗಿ ಆಕಾಶ ನಿರ್ಮಲವಾಗತೊಡಗಿತು. ಮಧ್ಯರಾತ್ರಿಯವರೆಗೆ ಒಂದು ಹನಿ ಮಳೆಯೂ ಬರಲಿಲ್ಲ. ಹೀಗಾಗಿ, ಎಲ್ಲರೂ ಸಂತೋಷದಿಂದಿದ್ದರು. ಶ್ರೀಮಾತೆಯ ಶಿಷ್ಯ ಬ್ರಹ್ಮಚಾರಿ ಸುರೇನ್‌ಗೆ, ಸ್ವಾಮಿ ಶಿವಾನಂದರು, ಶ್ರೀಮಾತೆಯ ದಹನಕ್ರಿಯೆ ನಡೆದ ಸ್ಥಳವನ್ನು ಎಚ್ಚರದಿಂದ ನೋಡಿಕೊಳ್ಳುತ್ತ, ಪ್ರತಿದಿನ ಹೂವಿಟ್ಟು, ದೀಪ ಹಚ್ಚಲು ತಿಳಿಸಿದರು. ಅವನು ಹಾಗೆಯೇ ಅತ್ಯಂತ ನಿಷ್ಠೆಯಿಂದ ಪೂಜೆ ಮಾಡಿ, ಸ್ವಾಮಿ ಶಿವಾನಂದರ ಮೆಚ್ಚುಗೆ ಗಳಿಸಿದನು.

ಎರಡು ವರ್ಷಗಳ ನಂತರ ಸ್ವಾಮಿ ಶಿವಾನಂದರ ಇಚ್ಛೆಯನುಸಾರ ಆ ನಿರ್ದಿಷ್ಟ ಸ್ಥಳದಲ್ಲೇ, ಶ್ರೀಮಾತೆಯವರ ದೇವಸ್ಥಾನವನ್ನು ಕಟ್ಟಲಾಯಿತು. ಅಲ್ಲಿ ಶ್ರೀಮಾತೆ ಗಂಗೆಗೆ ಅಭಿಮುಖವಾಗಿ ಕುಳಿತು ಆ ಪುಣ್ಯನದಿಯ ದಡವನ್ನೆಲ್ಲ ಬೆಳಗುತ್ತಿದ್ದಾರೆ. ಪ್ರತಿದಿನ ನೂರಾರು ಭಕ್ತರು ಅಲ್ಲಿಗೆ ಭೇಟಿ ಇತ್ತು ಅವರ ಜೀವಂತ ಸಾನ್ನಿಧ್ಯವನ್ನು ಅನುಭವಿಸಿ ಆನಂದಪಡುತ್ತಿದ್ದಾರೆ. ಆ ಪಾವನ ತಾಣದಲ್ಲಿ ಧ್ಯಾನಕ್ಕೆ ಕುಳಿತು, ಆ ಸಮಯದಲ್ಲಿ ತಾಯಿಯ ಅಪಾರ ಕೃಪೆಯನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದಾರೆ!